# ದಿನಾಂಕ–05/01/2019 ರಂದು ನಡೆದಿರುವ ವಾರ್ಡ್ ಸಮಿತಿ ಸಭೆ ನಡುವಳಿಗಳು

**ಒಟ್ಟು ಸದಸ್ಯರ ಸಂಖ್ಯೆ:12**

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀ.ಎಸ್.ರಾಜಾ (ಬಂಡೆ ರಾಜ) (ಅಧ್ಯಕ್ಷರು) | ಹಾಜರು |
| 2 | ಶ್ರೀ.ವೆಂಕಟ ರಾವ್ (ಸದಸ್ಯರು) | ಗೈರು ಹಾಜರು |
| 3 | ಶ್ರೀ.ಗೋಪಿ (ಸದಸ್ಯರು) | ಗೈರು ಹಾಜರು |
| 4 | ಶ್ರೀಮತಿ.ಶಿಲ್ಪ (ಸದಸ್ಯರು) | ಹಾಜರು |
| 5 | ಶ್ರೀಮತಿ.ಎನ್.ಪ್ರೇಮ ಗೌಡ (ಸದಸ್ಯರು) | ಗೈರು ಹಾಜರು |
| 6 | ಶ್ರೀಮತಿ.ಮಂಜುಳ ರೆಡ್ಡಿ (ಸದಸ್ಯರು) | ಗೈರು ಹಾಜರು |
| 7 | ಶ್ರೀ.ವೆಂಕಟ ರೆಡ್ಡಿ (ಸದಸ್ಯರು) | ಹಾಜರು |
| 8 | ಶ್ರೀ.ನರಸಿಂಹಯ್ಯ (ಸದಸ್ಯರು) | ಗೈರು ಹಾಜರು |
| 9 | ಶ್ರೀ.ರಾಜ್‌ಕುಮಾರ್ (ಸದಸ್ಯರು) | ಹಾಜರು |
| 10 | ಶ್ರೀ.ಎಸ್.ಕೆ.ನಂದ (ಸದಸ್ಯರು) | ಹಾಜರು |
| 11 | ಶ್ರೀ.ಹರಿಬಾಬು (ಸದಸ್ಯರು) | ಹಾಜರು |
| 12 | ಶ್ರೀ.ಕೇಶವ್ ಪಾಟೀಲ್(ನೂಡಲ್ ಅಧಿಕಾರಿಗಳು) | ಹಾಜರು |

**ಟಿಪ್ಪಣಿ:– ಹಾಜರು– 07 ಜನ ಸದಸ್ಯರುಗಳು ಮತ್ತು ಗೈರು ಹಾಜರು – 05 ಜನ ಸದಸ್ಯರುಗಳು.**

ಈ ಮೇಲೆ ತಿಳಿಸಿರುವಂತೆ ಒಟ್ಟು 07 ಜನ ಸದಸ್ಯರ ಉಪಸ್ಥಿತಿಯಲ್ಲಿ ದಿನಾಂಕ–05/01/2019 ರಂದು ಪೂರ್ವಾಹ್ನ 10 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಎಸ್.ರಾಜಾ (ಬಂಡೆ ರಾಜ) ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿವೃಂಧದವರಿಗೆಲ್ಲಾ ಸ್ವಾಗತ ಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಇನ್ನು ಮುಂದೆ ಎಲ್ಲಾ ವಾರ್ಡ್ ಸಮಿತಿ ಸಭೆಗಳಿಗೆ ಮೂರು ದಿನ ಮುಂಚಿತವಾಗಿ ಸಭಾ ಸೂಚನಾ ಪತ್ರವನ್ನು ನೀಡಲು ವಾರ್ಡ್ ಇಂಜಿನಿಯರ್ ಆದ ಶ್ರೀ.ಕೇಶವ್ (ನೂಡಲ್ ಅಧಿಕಾರಿಗಳು) ರವರಿಗೆ ಸೂಚಿಸಲಾಯಿತು.
2. ವಾರ್ಡ್ ಸದಸ್ಯರಾದ ಶ್ರೀಮತಿ.ಶಿಲ್ಪ, ಶ್ರೀ.ರಾಜಕುಮಾರ್ ಮತ್ತು ಹಿರಿಯ ಆರೋಗ್ಯ ನಿರೀಕ್ಷಕರಾದ ಶ್ರೀ.ರಾಘವೇಂದ್ರರವರು ವಾರ್ಡ್ –51 ವಿಜಿನಾಪುರದ ಕಸದ ಸಮಸ್ಯೆಗೆ ಸಂಭಂದಿಸಿದಂತೆ ಒಣತ್ಯಾಜ್ಯ ಸಂಸ್ಕರಣಾ ಘಟಕವನ್ನು ನಿರ್ಮಾಣ ಮಾಡುವ ಬಗ್ಗೆ ಚರ್ಚಿಸಿ 30X40 ಅಡಿ ಜಾಗದ ಅವಶ್ಯಕತೆಯಿದ್ದು ವಿಜಿನಾಪುರ ವ್ಯಾಪ್ತಿಯ ಗ್ಯಾಸ್ ಗೋಡೌನ್ ಹಿಂಭಾಗದ ಜಾಗವನ್ನು ಸೂಕ್ತ ಜಾಗವೆಂದು ಪರಿಗಣಿಸಿ ಸದರಿ ಜಾಗದಲ್ಲಿ ಒಣತ್ಯಾಜ್ಯ ಸಂಸ್ಕರಣಾ ಘಟಕವನ್ನು ನಿರ್ಮಾಣಕ್ಕಾಗಿ ಪ್ರಸ್ತಾವನೆ ತಯಾರಿಸಲು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ಅದರಂತೆ ಸದರಿ ಜಾಗವು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸುಪರ್ಧಿಯಲ್ಲಿರುವುದರಿಂದ ಸದರಿಯವರಿಗೆ ಪತ್ರ ವ್ಯವಹರಿಸಿ ಸ್ಥಳಾವಕಾಶಕ್ಕಾಗಿ ಅನುಮೋದನೆ ಪಡೆದು ಒಣತ್ಯಾಜ್ಯ ಘಟಕದ ನಿರ್ಮಾಣಕ್ಕಾಗಿ ಬೇಕಾಗುವ ಎಲ್ಲಾ ಕ್ರಮಗಳನ್ನು ಕೂಡಲೇ ಕೈಗೊಳ್ಳಲು ಸಭೆಯಲ್ಲಿ ನಿರ್ಣಯಿಸಲಾಯಿತು.
3. ಸದಸ್ಯರಾದಂತ ಶ್ರೀ.ವೆಂಕಟರೆಡ್ಡಿ ರವರು ಕಸ ಸಂಗ್ರಹಣೆ ಮಾಡುವಾಗ ಪೌರ ಕಾರ್ಮಿಕರುಗಳಿಗೆ ವಿತರಿಸಿರುವ ಗಂಬೂಟು, ಹ್ಯಾಂಡ್ ಗ್ಲೌಸ್, ನೋಸ್ ಮಾಸ್ಕ್, ಹೆಲ್ಮೆಟ್ ಮತ್ತು ಸಮವಸ್ತ್ರಗಳನ್ನು ಧರಿಸದೆ ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿರುವುದು ಕಂಡುಬಂದಿರುತ್ತದೆ. ಅದರಿಂದ ಪೌರ ಕಾರ್ಮಿಕರ ಆರೋಗ್ಯದ ಮೇಲೆ ಪರಿಣಾಮ ಬೀರೋ ಸಾಧ್ಯತೆಗಳಿರುವುದರಿಂದ ಇನ್ನು ಮುಂದೆ ಎಲ್ಲಾ ಪೌರ ಕಾರ್ಮಿಕರುಗಳು ಕಡ್ಡಾಯವಾಗಿ ಗಂಬೂಟು, ಹ್ಯಾಂಡ್ ಗ್ಲೌಸ್, ನೋಸ್ ಮಾಸ್ಕ್, ಹೆಲ್ಮೆಟ್ ಮತ್ತು ಸಮವಸ್ತ್ರಗಳನ್ನು ಧರಿಸಿಯೇ ಕೆಲಸ

Scanned with CamScanner